48

# ಜಿಲ್ಲಾಧಿಕಾರಿಗಳ ನ್ಯಾಯಾಲಯ, ಕೋಲಾರ ಜಿಲ್ಲೆ, ಕೋಲಾರ

**ದಿನಾಂಕ:17/08/2016**

**ಪ್ರಕರಣ ಸಂಖ್ಯೆ: ಆರ್.ಎ.ಎಸ್.ಸಿ/ಎಸ್.ಟಿ 01/2011-12**

ಉಪಸ್ಥಿತರು:ಶ್ರೀ.ಡಾ॥ ಕೆ.ವಿ.ತ್ರಿಲೋಕ್ ಚಂದ್ರ ಭಾ.ಆ.ಸೇ.,
ಜಿಲ್ಲಾಧಿಕಾರಿಗಳು,
ಕೋಲಾರ ಜಿಲ್ಲೆ.

| ಮೇಲ್ಮನವಿದಾರರು | ವಿರುದ್ಧ | ಎದುರುದಾರರು |
|---|---|---|
| 1. ವೆಂಕಟೇಶಪ್ಪ<br>ಬಿನ್ ಚಿನ್ನಪ್ಪ<br>ಲಕ್ಕೂರು ಗ್ರಾಮ ಮತ್ತು ಹೋಬಳಿ<br>ಮಾಲೂರು ತಾಲ್ಲೂಕು<br>2. ಅಚ್ಚಪ್ಪ<br>ಬಿನ್ ಎ.ಕೆ. ತಳಾರಿಮುನಿಯಪ್ಪ<br>ಲಕ್ಕೂರು ಗ್ರಾಮ<br>ಲಕ್ಕೂರು ಹೋಬಳಿ<br>ಮಾಲೂರು ತಾಲ್ಲುಕು<br>( ಶ್ರೀ ಜಿ.ಶ್ರೀನಿವಾಸ್<br>-ವಕೀಲರು ರವರಿಂದ) | | 1. ಬಾಗ್ಯಲಕ್ಷ್ಮೀ<br>ಕೋಂ ಶ್ರೀನಿವಾಸ<br>ಲಕ್ಕೂರು ಗ್ರಾಮ ಮತ್ತು ಹೋಬಳಿ<br>ಮಾಲೂರು ತಾಲ್ಲೂಕು<br>2. ಮೆ॥ ಫೈರ್ ರೈಮರ್ ಡೆವಲಪರ್ಸ್ ಪ್ರೈ.ಲಿ.<br>-ಇವರ ಪರವಾಗಿ<br>ಮೊಹಮ್ಮದ್ ಇಸ್ಮಾಯಿಲ್ ಸೇಠ್<br>ನಿರ್ದೇಶಕರು<br>ನಂ. 401 ವಾಚನಿವಿಸ್ತಾ<br>ನಂ.5, 100 ಅಡಿರಸ್ತೆ<br>4ನೇ ಬ್ಲಾಕ್, ಕೋರಮಂಗಲ<br>ಬೆಂಗಳೂರು-560034<br>3. ನೀಲಮ್ಮ ಕೋಂ ಅನ್ನಯಪ್ಪ<br>4. ನಾಗೇಶ್ ಬಿನ್ ಅನ್ನಯಪ್ಪ<br>5. ಮಂಜುನಾಥ್ ಬಿನ್ ಅನ್ನಯಪ್ಪ<br>6. ರವಿ ಬಿನ್ ಅನ್ನಯ್ಯಪ್ಪ<br>-ಕ್ರಸಂ 3 ರಿಂದ 6 ವಾಸ<br>ಶ್ರೀರಾಮ ದೇವಸ್ಥಾನದ ಹತ್ತಿರ<br>ನಾರಾಯಣಪುರ<br>ಮಹದೇವಪುರ ಹೋಬಳಿ<br>ಬೆಂಗಳೂರು ಪೂರ್ವ ತಾಲ್ಲೂಕು<br>ಬೆಂಗಳೂರು ಜಿಲ್ಲೆ.<br>7. ಸಹಾಯಕ ಕಮೀಷನರ್<br>ಕೋಲಾರ ಉಪವಿಭಾಗ<br>( ಶ್ರೀ ಹೆಚ್.ವಿ. ರಮೇಶ್<br>-ವಕೀಲರು, ರವರಿಂದ) |

ವಿಷಯ: ಸಹಾಯಕ ಕಮೀಷನರ್, ಕೋಲಾರ ಉಪವಿಭಾಗ ರವರ ಕ್ರಮಾಂಕ: ಎಲ್ಎನ್‌ಡಿ/ಎಸ್.ಸಿ.ಎಸ್.ಟಿ 21/2006-07 ದಿನಾಂಕ:09/03/2011 ರ ಆದೇಶದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ

**0-0-0**

ಪ್ರಸ್ತಾವನೆ.

ಈ ಮೇಲ್ಮನವಿ ಅರ್ಜಿಯನ್ನು ಕರ್ನಾಟಕ ಪರಿಶಿಷ್ಟ ಜಾತಿಗಳ/ ಪರಿಶಿಷ್ಟ ವರ್ಗಗಳ (ಹಲವು ನಿಶ್ಚಿತ ಜಮೀನುಗಳ ಪರಭಾರೆ ನಿಷೇಧ) ಅಧಿನಿಯಮ 1978 ರ ಕಲಂ 5ಎ ರಂತೆ ಸಲ್ಲಿಸಿರುತ್ತಾರೆ.

...2

ಪ್ರಕರಣದ ಸಂಕ್ಷಿಪ್ತ ವಿವರ,

1. ಮಾಲೂರು ತಾಲ್ಲೂಕು ಲಕ್ಕೂರು ಹೋಬಳಿ ಲಕ್ಕೂರು ಗ್ರಾಮದ ಶ್ರೀ ವೆಂಕಟೇಶಪ್ಪ ಬಿನ್ ಚಿನ್ನಪ್ಪ ರವರು ಸಹಾಯಕ ಕಮೀಷನರ್, ಕೋಲಾರ ಉಪವಿಭಾಗ ರವರಿಗೆ ಪಿಟಿಸಿಎಲ್ ಅಧಿನಿಯಮ 1978 ರ ಕಲಂ 5 ರಂತೆ ಅರ್ಜಿಸಲ್ಲಿಸಿರುತ್ತಾರೆ. ಇದರಲ್ಲಿ ಲಕ್ಕೂರು ಗ್ರಾಮದ ಸ.ನಂ. 273 ರಲ್ಲಿ 2 ಎಕರೆ ಜಮೀನು ತನ್ನ ತಾತ ಎ.ಕೆ.ತಳಾರಿ ಮೂಗಪ್ಪ ರವರಿಗೆ ದಿನಾಂಕ:28/07/1961 ರಂದು ದರಖಾಸ್ತು ಮೂಲಕ ಮಂಜೂರಾಗಿದ್ದು, ಅವರು ಅದನ್ನು ಭೂ ಮಂಜೂರಾತಿ ಷರತ್ತನ್ನು ಉಲ್ಲಂಘಿಸಿ ಪರಭಾರೆ ಮಾಡಿರುತ್ತಾರೆಂದು ತಿಳಿಸಿ ಸದರಿ ಕ್ರಯ ವಹಿವಾಟಗಳನ್ನು ಅನೂರ್ಜಿತಗೊಳಿಸಿ ಜಮೀನನ್ನು ತನಗೆ ಮರುದಾನ ಮಾಡಬೇಕೆಂದು ಕೋರಿರುತ್ತಾರೆ. ಈ ಬಗ್ಗೆ ಸಹಾಯಕ ಕಮೀಷನರ್ ರವರು ತಹಶೀಲ್ದಾರ್, ಮಾಲೂರು ತಾಲ್ಲೂಕು ರವರಿಂದ ವರದಿಯನ್ನು ಪಡೆದಿರುತ್ತಾರೆ. ತಹಶೀಲ್ದಾರ್ ರವರ ಪತ್ರ ಕ್ರಮಾಂಕ: ಪಿ.ಟಿ.ಸಿ.ಎಲ್/ಸಿಆರ್ 68/2006-07 ದಿನಾಂಕ:25/01/2007 ರಂತೆ ಲಕ್ಕೂರು ಗ್ರಾಮದ ಸ.ನಂ. 273 ರಲ್ಲಿ 2 ಎಕರೆ ಜಮೀನು ದಿನಾಂಕ:28/07/1961 ರಂದು ಎ.ಕೆ.ತಳಾರಿ ಮೂಗಪ್ಪ ರವರಿಗೆ ದರಖಾಸ್ತು ಮೂಲಕ ಮಂಜೂರಾಗಿದ್ದು, ಹಲವಾರು ಕ್ರಯ ವಹಿವಾಟುಗಳನ್ನು ಉಲ್ಲೇಖಿಸಿರುತ್ತಾರೆ. ಇದು ಪಿ.ಟಿ.ಸಿ.ಎಲ್ ಕಾಯ್ದೆ ಉಲ್ಲಂಘನೆ ಆಗಿರುವುದರಿಂದ ಮುಂದಿನ ಕ್ರಮ ತೆಗೆದುಕೊಳ್ಳಲು ವರದಿ ಸಲ್ಲಿಸಿರುತ್ತಾರೆ. ಸಹಾಯಕ ಕಮೀಷನರ್ ರವರು ವಿಚಾರಣೆ ನಡೆಸಿ ಪ್ರಕರಣ ಸಂಖ್ಯೆ:ಎಲ್.ಎನ್.ಡಿ/ಎಸ್.ಸಿ.ಎಸ್.ಟಿ 21/2006-07 ರಲ್ಲಿ ದಿನಾಂಕ:09/03/2011 ರಂದು ಹೊರಡಿಸಿದ ಆದೇಶದಲ್ಲಿ ಅರ್ಜಿಯನ್ನು ತಿರಸ್ಕರಿಸಿರುತ್ತಾರೆ. ಈ ಆದೇಶದಿಂದ ಬಾದಿತರಾದ ಮೇಲ್ಮನವಿದಾರರು ಪ್ರಸ್ತುತ ಮೇಲ್ಮನವಿ ಸಲ್ಲಿಸಿರುತ್ತಾರೆ. ಉಭಯತ್ರರಿಗೂ ನೋಟೀಸು ನೀಡಿ ವಿಚಾರಣೆ ಪ್ರಾರಂಭಿಸಲಾಯ್ತು.

2. ದಿನಾಂಕ:09-07-2014 ರಂದು ಉಭಯತ್ರರು ಹಾಜರು, ಲಿಖಿತ ವಾದ ಸಲ್ಲಿಸಲು ಕಾಲಾವಕಾಶ ನೀಡಿ ಪ್ರಕರಣವನ್ನು ಆದೇಶಕ್ಕಾಗಿ ಕಾದಿರಿಸಲಾಗಿತ್ತು. ಹಿಂದಿನ ಪೀಠಾಧಿಕಾರಿಗಳು ಆದೇಶ ಹೊರಡಿಸದ ಕಾರಣ ಪ್ರಕರಣವನ್ನು ಪುನಃ ವಿಚಾರಣೆಗಾಗಿ ತೆಗೆದುಕೊಳ್ಳಲಾಯ್ತು. ದಿನಾಂಕ:19-08-2015 ರಂದು ಉಭಯತ್ರರು ಹಾಜರು. ಮೇಲ್ಮನವಿದಾರರ ವಕೀಲರು ಈಗಾಗಲೇ ಲಿಖಿತವಾದ ಮಂಡಿಸಿರುತ್ತಾರೆ. 2ನೇ ಎದುರುದಾರರ ವಕೀಲರು ತಾವೂ ಸಹ ಲಿಖಿತವಾದ ಸಲ್ಲಿಸಿರುವುದರಿಂದ ಆದೇಶ ಹೊರಡಿಸಬಹುದೆಂದು ನಿವೇದಿಸಿದ ಮೇರೆಗೆ ಪ್ರಕರಣವನ್ನು ಆದೇಶಕ್ಕಾಗಿ ಕಾದಿರಿಸಲಾಯ್ತು.

3. ಮೇಲ್ಮನವಿದಾರರ ವಕೀಲರು ಮಂಡಿಸಿದ ವಾದದಲ್ಲಿ ಲಕ್ಕೂರು ಗ್ರಾಮದ ಸ.ನಂ. 273 ರಲ್ಲಿ 2-00 ಎಕರೆ ಜಮೀನು ಎ.ಕೆ.ತಳಾರಿ ಮೂಗ ರವರಿಗೆ ದಿನಾಂಕ:28/07/1961 ರಂದು ದರಖಾಸ್ತು ಮೂಲಕ ಮಂಜೂರು ಆಗಿದ್ದು, ಅದು ಭೂ ಮಂಜೂರಾತಿ ಷರತ್ತಿನ ಉಲ್ಲಂಘನೆಯಿಂದ 1988-89 ನೇ ಸಾಲಿನಲ್ಲಿ ಪರಭಾರೆ ಆಗಿರುವುದಾಗಿ ಈ ಬಗ್ಗೆ ತಾನು 7ನೇ ಎದುರುದಾರರಿಗೆ ವಿಚಾರಣೆ ವೇಳೆಯಲ್ಲಿ ದಾಖಲೆಗಳನ್ನು ಸಲ್ಲಿಸಿದ್ದೂ ಅವರು ಅದನ್ನು ಪರಿಗಣಿಸದೆ ತಮ್ಮ ಅರ್ಜಿಯನ್ನು ತಿರಸ್ಕರಿಸಿರುವುದು ಸರಿಯಾದ ಕ್ರಮವಲ್ಲ ಎಂದು ತಿಳಿಸಿ ಈ ಮೇಲ್ಮನವಿಯನ್ನು ಪರಿಗಣಿಸಬೇಕೆಂದು ಕೋರಿರುತ್ತಾರೆ. 7ನೇ ಎದುರುದಾರರು ದಾಖಲೆಗಳನ್ನು ಪರಿಶೀಲಿಸದೆ, ವಾಸ್ತಾವಾಂಶವನ್ನು ಗಣನೆಗೆ ತೆಗೆದುಕೊಳ್ಳದೆ ಹೊರಡಿಸಿರುವ ಆದೇಶ ಕಾನೂನಿನ ದೃಷ್ಟಿಯಲ್ಲಿ ಅಸಿಂಧುವಾಗಿರುವುದರಿಂದ ಸದರಿ ಅರ್ಜಿಯನ್ನು ರದ್ದುಪಡಿಸುವ ಮೂಲಕ ತಮ್ಮ ಮೇಲ್ಮನವಿ ಅರ್ಜಿಯನ್ನು ಪುರಸ್ಕರಿಸಬೇಕೆಂದು ಕೋರಿರುತ್ತಾರೆ.

4. 2ನೇ ಎದುರುದಾರರ ಪರವಾಗಿ ಸಲ್ಲಿಸಲಾದ ವಾದದಲ್ಲಿ ಲಕ್ಕೂರು ಗ್ರಾಮದ ಸ.ನಂ.273/ಪಿ-24 ರಲ್ಲಿನ 2-00 ಎಕರೆ ಜಮೀನನ್ನು ತಾನು 1ನೇ ಎದುರುದಾರರಿಂದ ದಿನಾಂಕ:24/01/2007 ರ ನೋಂದಾಯಿತ ಕ್ರಯಪತ್ರದ ಮೂಲಕ ಖರೀದಿಸಿದ್ದು, ಅದು ಜಿಲ್ಲಾಧಿಕಾರಿಗಳಿಂದ ಕ್ರಮಾಂಕ:ಎಎಲ್‌ಎನ್.ಸಿಆರ್300/2005-06 ರಲ್ಲಿ ಭೂ ಪರಿವರ್ತನಾ ಆದೇಶ ಪಡೆದಿರುವುದಾಗಿ ತಿಳಿಸಿರುತ್ತಾರೆ. ಈ ಜಮೀನು ತಳಾರಿ ಮೂಗಪ್ಪ ರವರಿಗೆ ಮಂಜೂರಾದ ಜಮೀನಲ್ಲವೆಂದೂ, ಮಂಜೂರು ಆಗಿರುವುದಕ್ಕೆ ಯಾವುದೇ ದಾಖಲೇ ಇಲ್ಲವೆಂದು ವಾದಿಸಿರುತ್ತಾರೆ. ಭೂ ಮಂಜೂರಾತಿ ಬಗ್ಗೆ ಯಾವುದೇ ಆದೇಶ ಲಭ್ಯವಿಲ್ಲವೆಂದೂ, ಸದರಿ ಜಮೀನಿನ ಕ್ರಯವಹಿವಾಟಿನ ಬಗ್ಗೆ ತಹಶೀಲ್ದಾರ್ ಸಲ್ಲಿಸಿರುವ ವರದಿಯಲ್ಲಿ ಹಲವಾರು ನ್ಯೂನ್ಯತೆಗಳಿವೆ ಎಂದು, ಭೂ ಮಂಜೂರಾತಿ ದೃಢಪಡಿಸಿಕೊಳ್ಳುವ ಬಗ್ಗೆ ಉಚ್ಚನ್ಯಾಯಾಲದ ಹಲವಾರು ತೀರ್ಪುಗಳನ್ನು ಉಲ್ಲೇಖಿಸಿರುತ್ತಾರೆ. ಮೇಲ್ಕಂಡ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದುಕೊಂಡು

7ನೇ ಎದುರುದಾರರು ಹೊರಡಿಸಿರುವ ಪ್ರಶ್ನಿತ ಆದೇಶ ಕ್ರಮಬದ್ಧವಾಗಿರುವುದರಿಂದ ಸದರಿ ಆದೇಶದಲ್ಲಿ ಈ ನ್ಯಾಯಾಲಯವು ಮಧ್ಯ ಪ್ರವೇಶಿಸುವ ಅಗತ್ಯ ಇಲ್ಲವೆಂದು ವಾದಿಸಿ, ಮೇಲ್ಮನವಿ ಅರ್ಜಿಯನ್ನು ವಜಾಕರಿಸುವ ಮೂಲಕ ಪ್ರಶ್ನಿತ ಆದೇಶವನ್ನು ಎತ್ತಿಹಿಡಿಯಬೇಕೆಂದು ಕೋರಿರುತ್ತಾರೆ.

5. ಉಭಯತ್ರರು ನಿವೇದಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕಡತದಲ್ಲಿ ಲಭ್ಯವಿರುವ ದಾಖಲೆಗಳನ್ನು, ಪ್ರಶ್ನಿತ ಆದೇಶದ ಹಿನ್ನೆಲೆಯಲ್ಲಿ ಅವಲೋಕಿಸಲಾಯ್ತು ತಹಶೀಲ್ದಾರ್, ಮಾಲೂರು ತಾಲ್ಲೂಕು ರವರ ಕಚೇರಿಯಲ್ಲಿ ನಿರ್ವಹಿಸಿರುವ ದರಖಾಸ್ತು ವಹಿಯಲ್ಲಿ ಲಕ್ಕೂರು ಗ್ರಾಮದ ಗೋಮಾಳ ಸ.ನಂ. 273 ರಲ್ಲಿ ಎ.ಕೆ.ತಳಾರಿ ಮೂಗಪ್ಪ ರವರಿಗೆ ದರಖಾಸ್ತು ಮೂಲಕ 2-00 ಎಕರೆ ಜಮೀನು ಸಹಾಯಕ ಕಮೀಷನರ್, ಕೋಲಾರ ಉಪವಿಭಾಗ ರವರಿಂದ ದಿನಾಂಕ:28/07/1961 ರ ಆದೇಶದಂತೆ ಮಂಜೂರು ಆಗಿರುತ್ತೆ. ಈ ಬಗ್ಗೆ 1964-65 ನೇ ಸಾಲಿನ ಪಹಣಿ ಪತ್ರಿಕೆಯಲ್ಲಿ ನಮೂದಿರುತ್ತೆ. ಆದ್ದರಿಂದ ದಾವಾ ಸ್ವತ್ತು ದರಖಾಸ್ತು ಮೂಲಕ ಮಂಜೂರು ಆದ ಜಮೀನು ಎಂಬುದಕ್ಕೆ ಯಾವುದೇ ಸಂಶಯ ಉದ್ಭವಿಸುವುದಿಲ್ಲ. ಮಂಜೂರುದಾರರು ಎ.ಕೆ.ತಳಾರಿ ಮೂಗಪ್ಪ ಆಗಿದ್ದು ಅವರ ಹೆಸರಿನ ಹಿಂದೆ ಉಲ್ಲೇಖಿಸಿರುವಂತೆ ಸದರಿಯವರು ಪರಿಶಿಷ್ಟ ಜಾತಿಗೆ ಸೇರಿದವರಾಗಿರುತ್ತಾರೆ. ಈ ಬಗ್ಗೆ ತಹಶೀಲ್ದಾರ್ ಮಾಲೂರು ತಾಲ್ಲೂಕು ರವರು ತಮ್ಮ ಪತ್ರದ ಸಂಖ್ಯೆ ಪಿಟಿಸಿಎಲ್ ಸಿಆರ್ 68/06-07 ರಂತೆ ದಿನಾಂಕ 25/01/2007 ರಂದು ಸಹಾಯಕ ಕಮೀಷನರ್ ಕೋಲಾರ ಉಪವಿಭಾಗ ರವರಿಗೆ ಬರೆದಿರುವ ಪತ್ರದಲ್ಲಿ ಸ್ಪಷ್ಟಪಡಿಸಿರುತ್ತಾರೆ. 1971-72 ರಿಂದ 74-75 ನೇ ಸಾಲಿನ ಫಹಣಿ ಪರಿಶೀಲಿಸಲಾಗಿ ಎ.ಕೆ.ಮೂಗ ಹೆಸರನ್ನು ಗುಂಡುಸುತ್ತಿ ನರಸಿಂಹ 1-20 ಮತ್ತು ಮುನಿಚಿನ್ನ 0-20 ಎಂಬುದಾಗಿ ನಮೂದಿಸಿರುತ್ತೆ. ಈ ಪೈಕಿ ನರಸಿಂಹಯ್ಯ ಮತ್ತು ಈತನ ಮಕ್ಕಳಾದ ವೆಂಕಟೇಶಪ್ಪ ಮತ್ತು ಕೃಷ್ಣಪ್ಪ ಇವರಿಂದ 1-20 ಎಕರೆ ಜಮೀನು ಅಣ್ಣಯ್ಯಪ್ಪ (ಅ) ಮುನಿಶಾಮಿ ಬಿನ್ ಕೋಟಪ್ಪ ಇವರಿಗೆ ನೋಂದಾಯಿತ ಕ್ರಯ ಪತ್ರ ಸಂಖ್ಯೆ:464/83-84 ರಂತೆ ಕ್ರಯವಾಗಿರುತ್ತೆ. ನಂತರ ಅಣ್ಣಯ್ಯಪ್ಪ ರವರು ಅಶೋಕ್‌ಮೂರ್ತಿ ಬಿನ್ ಎಂ.ಮುನಿಯಪ್ಪ ಇವರಿಗೆ ಕ್ರಯ ಪತ್ರ ಸಂಖ್ಯೆ:2095/94-95 ದಿನಾಂಕ:25/09/1995 ರಂತೆ ಮಾರಾಟ ಮಾಡಿರುತ್ತಾರೆ. ನಂತರ ಅಶೋಕ್‌ಮೂರ್ತಿ ರವರು ಈ ಜಮೀನನ್ನು ಶ್ರೀಮತಿ ಭಾಗ್ಯಲಕ್ಷ್ಮೀ ಕೋಂ ಶ್ರೀನಿವಾಸ ರವರಿಗೆ ಪತ್ರದ ಸಂಖ್ಯೆ:3597/2004-05 ದಿನಾಂಕ:21/03/05 ರಂತೆ ಮಾರಾಟ ಮಾಡಿರುತ್ತಾರೆ.

ಮುನಿಚಿನ್ನ ರವರ ಹೆಸರಿನಲ್ಲಿದ್ದ 0-20 ಗುಂಟೆ ಜಮೀನು ಮುನಿಚಿನ್ನ ರವರಿಂದ ಇವರ ಅಳಿಯ ಮುನಿಯಪ್ಪ ಬಿನ್ ಮುನಿಯಪ್ಪ ರವರಿಗೆ ಫವತಿವಾರಸು ಮೂಲಕ ಎಂ.ಆರ್1/95-96 ರಂತೆ ಖಾತೆ ಆಗಿರುತ್ತದೆ. ನಂತರ ಸದರಿ 0-20 ಗುಂಟೆ ಜಮೀನು ಲಕ್ಷ್ಮಮ್ಮ ಕೋಂ ಲೇಟ್ ವೆಂಕಟಪ್ಪ ರವರಿಗೆ ಸಿವಿಲ್ ನ್ಯಾಯಾಲಯದ ಆದೇಶ ಸಂಖ್ಯೆ:ಓ.ಎಸ್456/95 ದಿನಾಂಕ:11/10/2000. ರಂತೆ ಎಂ.ಆರ್ 11/00-01 ರಂತೆ ಖಾತೆಯಾಗಿರುತ್ತದೆ. ನಂತರ ಲಕ್ಷ್ಮಮ್ಮ ರವರು ನಿರ್ಮಲ ಕೋಂ ಎಂ.ರವಿ ರವರಿಗೆ ಪತ್ರ ಸಂಖ್ಯೆ:3110/04-05 ದಿನಾಂಕ:05/02/2005 ರಂತೆ ಮಾರಾಟ ಮಡಿರುತ್ತಾರೆ. ನಿರ್ಮಲ ರವರು ಈ ಜಮೀನನ್ನು ಒಂದನೇ ಎದುರುದಾರರಾದ ಭಾಗ್ಯಲಕ್ಷ್ಮೀ ಕೋಂ ಶ್ರೀನಿವಾಸ ರವರಿಗೆ ಪತ್ರದ ಸಂಖ್ಯೆ:1789/05-06 ದಿನಾಂಕ:06/10/05 ರಂತೆ ಮಾರಾಟ ಮಾಡಿರುತ್ತಾರೆ.

ನಂತರ ಈ ಎರಡೂ ಜಮೀನು ಅಂದರೆ ಒಟ್ಟು 2-00 ಎಕರೆ ಜಮೀನು ಒಂದನೇ ಎದುರುದಾರರಾದ ಶ್ರೀಮತಿ ಭಾಗ್ಯಲಕ್ಷ್ಮೀ ಕೋಂ ಶ್ರೀನಿವಾಸ ರವರ ಹೆಸರಿಗೆ ನಂ.ಎ.ಎಲ್.ಎನ್/ಸಿಆರ್300/05-06 ದಿನಾಂಕ:05/10/2006 ರಂತೆ ವ್ಯವಸಾಯೇತರ ಉದ್ದೇಶಕ್ಕಾಗಿ ಭೂ ಪರಿವರ್ತನೆ ಆಗಿರುತ್ತದೆ. ಶ್ರೀಮತಿ ಭಾಗ್ಯಲಕ್ಷ್ಮೀ ಕೋಂ ಶ್ರೀನಿವಾಸ ರವರು ಈ ಜಮೀನು ಎರಡನೇ ಎದುರುದಾರರಿಗೆ ಪತ್ರ ಸಂಖ್ಯೆ:4964/2006-07 ದಿನಾಂಕ:24/01/2007 ರಂತೆ ಮಾರಾಟ ಮಾಡಿರುತ್ತಾರೆ. ಈ ಎಲ್ಲಾ ಅಂಶಗಳನ್ನು ಪರಿಗಣಿಸಿದಾಗ ದಾವಾಸ್ವತ್ತಿನ ನೋಂದಾಯಿತ ದಾಸ್ತಾವೇಜುಗಳು ಪಿ.ಟಿ.ಸಿ.ಎಲ್. ಅಧಿನಿಯಮ 1978 ಜಾರಿಗೆ ಬಂದ ಮೇಲೆ ನಡೆದಿರುತ್ತೆ. ಪರಿಶಿಷ್ಟ ಜಾತಿಗೆ ಮಂಜೂರು ಆದ ಜಮೀನನ್ನು ಖರೀದಿಸಬೇಕಾಗಿದ್ದಲ್ಲಿ ಸರ್ಕಾರದ ಪೂರ್ವಾನುಮತಿ ಪಡೆಯಬೇಕಾಗಿರುತ್ತೆ. ಆದರೆ ಈ ಪ್ರಕರಣದಲ್ಲಿ ಅಂತಹ ಯಾವುದೇ ಅನುಮತಿ ಪಡೆದಿರುವುದಿಲ್ಲ. ಆದ್ದರಿಂದ ಕ್ರಯ ವಹಿವಾಟು ಪಿಟಿಸಿಎಲ್ ಅಧಿನಿಯಮ 1978 ರ ಕಲಂ 4(2) ನ್ನು ಆಕರ್ಷಿಸಿದ್ದು ಅಸಿಂಧುವಾಗಿರುತ್ತೆ. **Therefore this is a crystal clear case of violation of section 4(2) of the Karnataka SC's and ST's (prohibition of transfer of certain lands) Act 1978.** ಈ ಹಿನ್ನೆಲೆಯಲ್ಲಿ 7 ನೇ ಎದುರುದಾರರು ಹೊರಡಿಸಿರುವ ಪ್ರಶ್ನಿತ ಆದೇಶ ನ್ಯೂನ್ಯತೆಯಿಂದ ಕೂಡಿದೆ **(Suffers from infirmity).**

...4

# ಆದೇಶ

ಮೇಲ್ಮನವಿ ಅರ್ಜಿಯನ್ನು ಪುರಸ್ಕರಿಸಿದೆ. ಸಹಾಯಕ ಕಮೀಷನರ್, ಕೋಲಾರ ಉಪವಿಭಾಗ ರವರ ಪ್ರಶ್ನಿತ ಆದೇಶ ಕ್ರಮಾಂಕ ಎಲ್‌ಎನ್‌ಡಿ/ಎಸ್‌ಸಿ.ಎಸ್‌ಟಿ 21/2006-07 ದಿನಾಂಕ:09/03/2011 ನ್ನು ರದ್ದುಪಡಿಸಿದೆ. ಮಾಲೂರು ತಾಲ್ಲೂಕು, ಲಕ್ಕುರು ಹೋಬಳಿ, ಲಕ್ಕೂರು ಗ್ರಾಮದ ವಿವಾದಿತ ಸರ್ವೆ ನಂ. 273 ರಲ್ಲಿ ಎ.ಕೆ.ತಳಾರಿ ಮೂಗಪ್ಪ ರವರಿಗೆ ದರಖಾಸ್ತು ಮೂಲಕ ಮಂಜೂರಾದ 2-00 ಎಕರೆ ಜಮೀನಿನಲ್ಲಿ ನಡೆದ ಎಲ್ಲಾ ಕ್ರಯವಹಿವಾಟುಗಳನ್ನು ಪಿಟಿಸಿಎಲ್ ಅಧಿನಿಯಮ 1978 ರ ಕಲಂ 4(1) ರಂತೆ ಅಸಿಂಧು ಎಂದು ಘೋಷಿಸಿ, ಸದರಿ ಕ್ರಯವಹಿವಾಟನ್ನು ಅನೂರ್ಜಿತಗೊಳಿಸಿದೆ. ಕ್ರಯದಾರರನ್ನು ಈ ಜಮೀನಿನಿಂದ ತಕ್ಷಣದಿಂದಲೇ ಹೊರದೂಡಲು ತಹಶೀಲ್ದಾರ್, ಮಾಲೂರು ತಾಲ್ಲೂಕು ರವರಿಗೆ ನಿರ್ದೇಶಿಸಿದೆ. ಹಾಗೂ ಸಹಾಯಕ ಕಮೀಷನರ್ ರವರು ಸದರಿ ಜಮೀನನ್ನು ಮೂಲ ಮಂಜೂರಿದಾರರ ನ್ಯಾಯಬದ್ಧ ವಾರಸುದಾರರಿಗೆ ಮರುದಾನ ಮಾಡಲು ಸೂಚಿಸಿದೆ. ಅಲ್ಲಿಯವರೆಗೆ ಸದರಿ ಜಮೀನು ಸರ್ಕಾರದಲ್ಲಿ ನಿಹಿತಗೊಂಡಿರುತ್ತದೆ.

ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ಉಖ್ತಲೇಖನ ನೀಡಿ, ಬೆರಳಚ್ಚು ಮಾಡಿಸಿ ಪರಿಷ್ಕರಿಸಿದೆ. ನಂತರ ದಿನಾಂಕ:17/08/2016 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಿದೆ.

K.V. Trilokchandra

ಜಿಲ್ಲಾಧಿಕಾರಿಗಳು,
ಕೋಲಾರ ಜಿಲ್ಲೆ

ನಕಲು ಸರಿದೆ

ಜಿಲ್ಲಾಧಿಕಾರಿಗಳ ಪರವಾಗಿ
ಕೋಲಾರ ಜಿಲ್ಲೆ.
1/9/16